
ಜಿ.ಆರ್. ಆದಿನಾರಾಯಣಮುನಿ, ಬೆಂಗಳೂರು

ಮಾನವನ ಉನ್ನತಿಯ ಮಾರ್ಗ ಯಾವುದು?




ಮೆಟ್ಟಲು, ರ್‍ಯಾಂಪ್, ಲಿಫ್ಟ್, ಎಸ್ಕಲೇಟರ್!

ಬಸವಣ್ಣ ಹೊನಖಾಂಡೆ, ಬಿಜಾಪುರ

ಖಾಲಿ ತಿಜೋರಿಯನ್ನು ಯಾವ ದಿಕ್ಕಿಗೆ ಮುಖಮಾಡಿ ಇರಿಸಿದರೆ ಅವ್ಯಾಹತವಾಗಿ ಹಣ ಸಂಗ್ರಹವಾಗಬಹುದು, ವಾಸ್ತುಶಾಸ್ತ್ರಜ್ಞರೆ?

ಸಿರಿವಂತ ಮಾವನ ಮನೆಯ ದಿಕ್ಕಿಗೆ ತಿರುಗಿಸಿಡಲ್ ಹೊನ್ನ ಕಂಡೀರಿ ಹೊನಖಾಂಡೆ!

ಎಚ್.ಆರ್. ದೇಸಾಯಿ, ರಾಯಚೂರು

ಇಷ್ಟು ದೇವತೆಗಳು, ಗುಡಿಗಳು, ಮಠಗಳು, ಮಠಾಧೀಶರು ಇದ್ದರೂ ನಾವೇಕೆ ಅಧರ್ಮದಿಂದ ನಡೆಯುತ್ತಿದ್ದೇವೆ?




ಕುರುಡನ ಮುಂದೆ ಎಷ್ಟು ದೀಪವಿದ್ದರೇನು! ನಾವು ಧರ್ಮಗುರುಡರು!

ವಿ. ಹಮೀದ್, ವಿಟ್ಲ

ಲವ್ ಮಾಡಲು ವ್ಯಾಲೆಂಟೈನ್ಸ್ ದಿವಸವೇ ಆಗಬೇಕಾ?

ಹಾಗೇನಿಲ್ಲ, ಪರಸ್ಪರ ವಾಲಿದ ಟೀನ್‌ಗಳಾದರಾಯ್ತು!

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ

ಶಿವನಿಗೆ ಒಬ್ಬಳು ಹೆಂಡತಿ ಇರುವಾಗ ಇನ್ನೊಬ್ಬಳು ಪ್ರೇಯಸಿಯ ಅಗತ್ಯವೇನಿತ್ತು?

ಪಾರ್ವತಿ ತಲೆ ಬಿಸಿ ಮಾಡಿದಾಗ ಕೊಂಚ ತಂಪಾಗಿಸಲು!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಅಧಿಕಾರದ ದಾಹಕ್ಕೂ, ನೀರಿನ ದಾಹಕ್ಕೂ ಏನು ವ್ಯತ್ಯಾಸ?

ನೀರೆರೆದಷ್ಟೂ ಅಧಿಕಾರದಾಹ ಬೆಳೆಯುತ್ತದೆ, ನೀರಿನ ದಾಹ ತಣಿಯುತ್ತದೆ.

ಬಿ.ಎಸ್. ನಾರಾಯಣಸ್ವಾಮಿ, ಬೋಧನಹೊಸಹಳ್ಳಿ

ರಸ್ತೆಗಳು ಅಗಲವಾದಷ್ಟೂ ಅಪಘಾತಗಳು ಹೆಚ್ಚುತ್ತಿವೆಯಲ್ಲಾ...?

ಅಡ್ಡಾದಿಡ್ಡಿ ಓಡಾಡಲು ಹೆಚ್ಚು ಜಾಗ ದೊರೆಯಿತಲ್ಲಾ!

ಪಿ.ಎನ್. ಶ್ರೀವತ್ಸ, ಬೆಂಗಳೂರು

ಎಲ್ಲದಕ್ಕೂ ಕೊನೆ ಇರುವಂತೆ ಈ ಅಂಕಣಕ್ಕೆ ಕೊನೆ ಎಂದು?

ಇದು ಪ್ರಶ್ನೆ–ಉತ್ತರಗಳ ವರ್ತುಲ; ವರ್ತುಲಾಕಾರಕ್ಕೆ ಕೊನೆಯೆಂಬುದಿರುವುದಿಲ್ಲ!

ಆರ್. ಮಧುಸೂದನ್. ಹಾಸನ

ಪ್ರೀತಿಸಲು ಪ್ರೇಮಶಿಕ್ಷಣ ಕಡ್ಡಾಯ ಎಂಬ ಕಾನೂನು ಜಾರಿಯಾದರೆ?

ಆ ಕಾಲೇಜಿನ ಸುತ್ತ ದೊಣ್ಣೆ ಹಿಡಿದ ಅಪ್ಪ ಅಮ್ಮಂದಿರ ಪಡೆಯೇ ಜಾರಿಯಾಗುತ್ತದೆ!

ಎಂ.ಎನ್. ಸೋಮಶೇಖರ್, ಮೈಸೂರು

ರಾಮಾಯಣದಲ್ಲಿ ಸೀತೆಯೂ ಸಹ ಮಹಾಭಾರತದ ದ್ರೌಪದಿಯಂತೆ ಆಗಿದ್ದರೆ ಏನಾಗುತ್ತಿತ್ತು?

ದಶರಥನಿಗೆ ಮತ್ತೊಂದು ಇನ್‌ಸ್ಟೆಂಟ್ ಮಗ ಹುಟ್ಟಬೇಕಾಗುತ್ತಿತ್ತು!

ಎಂ.ಬಿ. ಖೋದಾನಪುರ, ಸವದತ್ತಿ

ಪರಸತಿಯರನ್ನು ಬಯಸುವವರಿಗೆ ದೇವರು ಯಾವ ಶಿಕ್ಷೆ ಕೊಡುತ್ತಾನೆ?

ಪರಸತಿಯ ದಾಂಡಿಗ ಗಂಡನಿಗೆ ವಿಷಯ ತಿಳಿಸಿಬಿಡುತ್ತಾನೆ!

ಪಿ. ವಿಜಯ್, ಲಿಂಗಸುಗೂರು

ಒಳ್ಳೆಯ ಹೆಂಡತಿ ಸಿಗಬೇಕೆಂದರೆ ಏನು ಮಾಡಬೇಕು ಸಾರ್?

ಕಂಠಪೂರ್ತಿ ಕುಡಿದು, ಕಂಠಮಟ್ಟ ಹೊದ್ದು ಮಲಗಿರಿ, ಕನಸಿನಲ್ಲಿ ಕಂಡಾಳು!

## ಬಹುಮಾನಿತ ಪ್ರಶ್ನೆ

ರವೀಂದ್ರನಾಥ ಶಿ.ಯಡಹಳ್ಳಿ, ಬೀಳಗಿ

ಎನ್‌ಕೌಂಟರ್‌ಗೂ, ಕ್ಯಾಶ್‌ಕೌಂಟರ್‌ಗೂ ಇರುವ ವ್ಯತ್ಯಾಸವೇನು?

ಕ್ಯಾಶ್‌ಕೌಂಟರ್‌ನಲ್ಲಿ ಹಣ, ಎನ್‌ಕೌಂಟರ್‌ನಲ್ಲಿ ಹೆಣ!

ಅರಕೆರೆ ಪಿ. ಸುರೇಶ್, ಭದ್ರಾವತಿ

ಸ್ವದೇಶಿ ಉಡುಗೆಗೂ, ವಿದೇಶಿ ಉಡುಗೆಗೂ ಏನು ವ್ಯತ್ಯಾಸ?

ಹಲವಾರು ಇಂಚುಗಳು!


ಎನ್. ಪ್ರಕಾಶ, ದೇವನಹಳ್ಳಿ

ಸ್ವಾಮಿ, ನಾನು ಬೆಂಗಳೂರಿಗೆ ಹೊಸಬ. ದಯವಿಟ್ಟು ಕನ್ನಡ ಮಾತನಾಡುವ ಜನ ಎಲ್ಲಿದ್ದಾರೆ ಎಂದು ತಿಳಿಸುವಿರಾ?

ಹೊಸಜಾಗದಲ್ಲೂ ನಿಮಗೆ ಬೇಕಾದ್ದನ್ನೇ ಹುಡುಕುವುದು ತಪ್ಪು, ಅಲ್ಲಿನ ಪರಿಸರಕ್ಕೆ ಹೊಂದಿಕೊಳ್ಳಿ ಸಾರ್!

ಜಿ. ಮಂಜುನಾಥ, ಬಳ್ಳಾರಿ

ಈರುಳ್ಳಿ ಬೆಲೆಯಂತೆ ಕ್ರಿಕೆಟಿಗರ ಬೆಲೆಯೂ ಹೆಚ್ಚಾಗುತ್ತಿದೆಯಲ್ಲಾ...?



ಕಣ್ಣೀರು ತರಿಸುವ ವಸ್ತುಗಳೆಲ್ಲಾ ಎಂದಿಗೂ ದುಬಾರಿಯೇ!

ಜಾಕೋಬ್ ಡಿಸೋಜ, ಕುರುವಳ್ಳಿ

ಬೆಕ್ಕು ಅಡ್ಡ ಬಂದಂತೆ ಹುಡುಗಿ ಅಡ್ಡ ಬಂದರೆ?

ಹುಡುಗಿಗೇ ಅಪಶಕುನ!

ಎ.ಎಸ್. ಸ್ವಾಮಿ, ಶೋರಾಪುರ

ಮೀನಿನ ಹೆಜ್ಜೆ ಎಂದರೇನು?

ಅದು ಮೆಗಾಸೀರಿಯಲ್‌ನ ಕಥೆಯಂತೆ; ಇದೆ ಎಂದರೆ ಇದೆ, ಇಲ್ಲ ಎಂದರೆ ಇಲ್ಲ!

■ ರಾಮ್